ಮಾಡುತ್ತಿರುವಂತೆ ಕೇಳಿಸುತ್ತದೆ; ಅದರಿಂದ ತಲೆ ಹೋಳಾದಂತಾಗುತ್ತದೆ. ಆ ತಲೆನೋವು ಇಡೀದಿನ ಬಾಧಿಸುತ್ತದೆ. ಸುತ್ತಿಗೆಯನ್ನು ತೆಗೆದುಕೊಂಡು ತಲೆಯಮೇಲೆ ಹೊಡೆದುಕೊಳ್ಳೋಣ ಅನ್ನಿಸುತ್ತದೆ ಎನ್ನುತ್ತಿದ್ದ. ಇಲ್ಲಿ ಟ್ರಾಫಿಕ್ಕಿನಲ್ಲಿ ಯಾರೂ ಅನವಶ್ಯಕ ಶಬ್ದ ಮಾಡುವುದಿಲ್ಲ. ಈತನಿಗೇನೋ ಮಾನಸಿಕ ಒತ್ತಡವಿದ್ದಿರಬೇಕು. ಹೀಗಾಗಿ ವೈದ್ಯರಲ್ಲಿ ತೋರಿಸಿಕೊಳ್ಳುವಂತೆ ಸಲಹೆ ನೀಡಿದ್ದೆವು. ಆದರೆ ಮರುದಿನ ಆತ ತನ್ನ ಕೋಣೆಯಲ್ಲಿ ವಿಷ ಸೇರಿಸಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆತನ ಬಂಧು ಬಳಗ ಗೆಳೆಯರ ಯಾವ ಮಾಹಿತಿಯೂ ನಮಗೆ ದೊರಕಲಿಲ್ಲ. ಹಾಗಾಗಿ ಶವ ಸಂಸ್ಕಾರ ಇಲ್ಲಿಯೇ ಮಾಡಿದೆವು. ನೀವೇನಾದರೂ...' ತಲೆ ಸುತ್ತಿದಂತಾಗಿ, ಮುಂದಿನ ಮಾತುಗಳೆಲ್ಲಾ ಅಸ್ಪಷ್ಟವಾಗಿ ಕೇಳುತ್ತಿರುವಂತೆನಿಸಿ ನನಗೇ ಗೊತ್ತಿಲ್ಲದಂತೆ ಫೋನನ್ನು ಕಿವಿಯಿಂದ ಸರಿಸಿ ಟೇಬಲ್ಲಿನ ಮೇಲಿಟ್ಟೆ. ಆಕಡೆಯಿಂದ 'ಹಲೋ... ಹಲೋ... ಆರ್ ಯು ದೇರ್...' ನಂತರ ಏನೇನೋ ಥೈ ಭಾಷೆಯ ಶಬ್ದಗಳು... 'ಹಲೋ...' ಕುಂಯ್... ಕುಂಯ್ ಶಬ್ದದೊಂದಿಗೆ ಕರೆ ಕಟ್ಟಾಯಿತು.

★★★

ಬ್ಯಾಂಕಾಕಿನಿಂದ ಹಿಂದಿರುಗಿದ ಮೇಲೆ ನಾನು ಮೋ–ನನ್ನು ಭೇಟಿಯಾಗಿದ್ದು ಒಂದೇ ಸಲ. ಅದೂ ತಿಂಗಳ ನಂತರ. ಆಗ ಸಿಕ್ಕಾಗ ಅವನ ಹಾಗೂ ಚಲಿಂಡಾಳ ನಡುವಿನ ಜಗಳದ ಸಂಗತಿಯೊಂದನ್ನು ಹೇಳಿದ್ದ. ತನಗೊಂದು ಮಗುವನ್ನು ಕೊಡು ಎಂದು ಆಕೆ ಕೇಳಿದ್ದಳು. ಯಾವುದೇ ಅಟ್ಯಾಚ್‌ಮೆಂಟು ಆಬ್ಲಿಗೇಷನ್ನು ಇಲ್ಲವೆಂದಾದರೆ ಒಂದೇನು ಹತ್ತು ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದ ಮೋ. ಒಪ್ಪಂದವಾಗಿ ವರ್ಷದ ಮೇಲಾದರೂ ಚಲಿಂಡಾಳ ಋತುಚಕ್ರದಲ್ಲಿ ಯಾವ ಬದಲಾವಣೆಗಳೂ ಕಂಡುಬಂದಿಲ್ಲ. ಹೀಗೇ ಒಂದು ದಿನ ಇಬ್ಬರೂ ಕುಡಿದ ಅಮಲಿನಲ್ಲಿದ್ದಾಗ ಇದೇ ವಿಷಯದ ಬಗ್ಗೆ ಚರ್ಚೆಯಾಗಿದೆ. ಯಾರು ಮೊದಲು ಶುರು ಮಾಡಿದರು, ಯಾರಿಂದ ಅದು ತಾರಕಕ್ಕೇರಿತು ಎಂಬುದರ ಬಗ್ಗೆ ಸ್ಪಷ್ಟ ಅರಿವಿಲ್ಲ ಮೋ–ನಿಗೆ. ಮಾತಿಗೆ ಮಾತು ಬೆಳೆದು ನಡುವೆ 'ಗಂಡಸಿನಿಂದ ಸುಲಭವಾಗಿ ಆಗಬಹುದಾದ ಇದೇ ಒಂದು ವರ್ಷದಲ್ಲಿ ಸಾಧ್ಯವಾಗಿಲ್ಲ ಎಂದಾದಮೇಲೆ, ಯಾವುದಾದರೂ ಲೆಡೀಬಾಯ್ ಶೋ ಕ್ಕೆ ಹೋಗಿ ಸೇರಿಕೊಳ್ಳುವುದೊಳಿತು' ಎಂಬಂತಾ ಕುಹಕದ ನುಡಿಯಾಡಿದ್ದಾಳೆ ಚಲಿಂಡಾ. ಕೋಪಗೊಂಡ ಮೋ ಕೈಲಿದ್ದ ಮದ್ಯವನ್ನು ಆಕೆಯ ಮುಖಕ್ಕೆ ಎರಚಿದ್ದಾನೆ. ಜಗಳ ಕೈ ಕೈ ಮಿಲಾಯಿಸುವಷ್ಟು ಹೋಗಿದೆ. ಆಗ ಬೇರ್ಪಟ್ಟವರು ಅದರ ನಂತರ ಭೇಟಿಯಾಗಿಲ್ಲ. ಇದನ್ನು ಹೇಳುವಾಗ ಹಿಂದೆಲ್ಲೂ ಕಾಣದ ವಿಚಿತ್ರ ರೋಷವೊಂದು ಮೋ–ನ ಮುಖದಲ್ಲಿ ಎದ್ದು ಕಾಣುತ್ತಿತ್ತು. 'ಡಾಮಿಟ್' ಎಂದು ತನ್ನ ಕೈಲಿದ್ದ ವಿಸ್ಕಿ ಗ್ಲಾಸನ್ನು ಟೇಬಲ್ಲಿಗೆ ಕುಟ್ಟಿ ಸುತ್ತಲಿರುವವರೆಲ್ಲ ಒಮ್ಮೆ ಆತನತ್ತ ತಿರುಗಿ ನೋಡುವಂತೆ ಮಾಡಿದ್ದ. ಈ ವಿಷಯದಲ್ಲಿ ಆತ ಸ್ವಲ್ಪ ಡಿಸ್ಟರ್ಬ್ ಆಗಿದ್ದ ಅನ್ನುವುದಂತೂ ನಿಜ. ಆದರೆ ಇಂಥ ಸಣ್ಣದ್ದಕ್ಕೆಲ್ಲಾ ಆತ ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆಯೇ ಇಲ್ಲ. ಹಾಗಾದರೆ, ಅತಿಯಾದ ಡ್ರಗ್ಸ್ ಸೇವನೆಯಿಂದ ಆಗಿರಬಹುದೇ? ಅಥವಾ ಆತನ ನೂರಾರು ವ್ಯವಹಾರಗಳಿವೆಯಲ್ಲ; ತಾನೆಲ್ಲಾದರೂ ಸಿಕ್ಕಿಬಿದ್ದೇನೆಂಬ ಮುನ್ಸೂಚನೆ ಸಿಕ್ಕಿದ್ದಿರಬಹುದೇ? ಅಥವಾ ಕೊಲೆಯಾಗಿರಬಹುದೇ? ಯಾರಿಗೆ ಗೊತ್ತು, ಹೆಂಗಸು ಕೊಡು ಎಂದು ಯಾಚಿಸಿದ್ದನ್ನು ಕೊಡಲಾಗದಿರುವುದಕ್ಕೆ ಗಂಡಸು ಆತ್ಮವನ್ನು ಘಾತಿಸಿಕೊಳ್ಳುವುದು ಇದೊಂದಕ್ಕೇ ಆಗಿರಲಿಕ್ಕೂ ಸಾಕು. ಅಥವಾ ಇದೆಲ್ಲಾ ಒಂದು ವ್ಯವಸ್ಥಿತ ಜಾಲವೇ? ಆತ ಸತ್ತಿರದೇ ಕಣ್ಮರೆಸಿಕೊಂಡಿರಬಹುದೇ... ಯಾವ ಊಹೆಗಳಲ್ಲೂ ಸ್ಪಷ್ಟತೆ ದೊರೆಯುತ್ತಿಲ್ಲ ನನಗೆ.